<u>ಓ ಎಸ್ ನಂ. 219/2020</u>
<u>ಡಿಡಬ್ಲ್ಯೂ 01</u>

ದಿನಾಂಕಃ 17.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

<u>ಪಾಟೀಸವಾಲುಃ</u> <u>ವಾದಿಯ ಪರ ವಕೀಲರಿಂದಃ</u>

ನಾನು ಯಾವ ವರ್ಷದಲ್ಲಿ ಹುಟ್ಟಿದೇನೆ ಎಂದು ಹೇಳಲು ಆಗುವುದಿಲ್ಲ. ಈಗ ನನಗೆ 70 ವರ್ಷ ವಯಸ್ಸು ಆಗಿದೆ. ಈರಪ್ಪ ದುಂಡಪ್ಪ ನಾವಿರವರು ಮಮದಾಪೂರ ಊರಿನವರು, ಅವರು ನನಗೆ ಗೊತ್ತು. ಅವರು ವಾದಿಗೆ ಏನಾಗಬೇಕು ಎಂದು ನನಗೆ ಗೊತ್ತಿಲ್ಲ. ಬಸವಂತ ದುಂಡಪ್ಪ ನಾವಿರವರು ವಾದಿಗೆ ತಂದೆಯಾಗಬೇಕು. ಗಂಗವ್ವ ಬಾಳಪ್ಪ ನಾವಿರವರು ನನಗೆ ಪರಿಚಯವಿಲ್ಲ. ಬಸವಂತರವರಿಗೆ 4 ಜನ ಮಕ್ಕಳು. ಅವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ. ನನ್ನ ಸಾಕ್ಷ್ಯಪ್ರಮಾಣಪತ್ರ ಹಾಗೂ ತಕರಾರಿಗೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ತಪಶಿ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ 3 ಎಕರೆ 10 ಗುಂಟೆ ಜಮೀನು ಇದ್ದು, ಅದರ ಸರ್ವೇ ನಂ.21/4 ಆಗಿರುತ್ತದೆ ಎಂದರೆ ಸರಿ. ಈ ಜಮೀನಿಗೆ ನೀರಿನ ವ್ಯವಸ್ಥೆಯನ್ನು ಹಳ್ಳದಿಂದ ಪೈಪ್‌ಲೈನ್ ಮೂಲಕ ಮಾಡಿಸಿದ್ದೇವೆ. ನನ್ನ ಜಮೀನು ವಾದಿಯ ಜಮೀನಿನಿಂದ 1 ಕಿ.ಮಿ ನ ಒಳಗೆ 4 ರಿಂದ 5 ಸರ್ವೇ ನಂಬರ್ ಗಳನ್ನು ಬಿಟ್ಟು ಬರುತ್ತದೆ. ಈ ಕೇಸಿನ ಸ್ವತ್ತಿನ ಚೆಕ್‌ಬಂದಿ ನನಗೆ ಹೇಳಲು ಆಗುವುದಿಲ್ಲ. ಅದರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ನಾನು ಶಾಲೆ ಕಲಿತಿಲ್ಲ. ಅದು 4 ಎಕರೆ ಇರುತ್ತದೆ. ವಾದಿ ಗುರುಪುತ್ರ ಮತ್ತು ಅವರ ಅಣ್ಣತಮ್ಮಂದಿರಿಗೆ ಈ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿದೆ. ಈ ಆಸ್ತಿಯನ್ನು ಗಂಗವ್ವರವರು ಬಸವಂತಪ್ಪರವರಿಗೆ ದಾನಪತ್ರದ ಮೂಲಕ ಕೊಟ್ಟಿರುತ್ತಾರೆ. ಅದು ಯಾವ ಇಸವಿಯಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ. ಬಸವಂತಪ್ಪ ಯಾವ ವರ್ಷದಲ್ಲಿ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ